ಟೀನರಸೀಪುರದ ಟಿ. ಎ. ಪಿ. ಸಿ. ಎಂ. ಎಸ್‌ಗೆ ಚುನಾವಣೆ ನಡೆಸುವ ಬಗ್ಗೆ

ಶ್ರೀ ಕೆ. ಜೆ. ರಾಮಸ್ವಾಮಿ.—ಟಿ. ನರಸೀಪುರ ಟಿ.ಎ.ಪಿ.ಸಿ.ಎಂ.ಎಸ್ ಇದರ ಆಡಳಿತಾಧಿಕಾರಿಯನ್ನು ರದ್ದು ಪಡಿಸಿ ಚುನಾವಣೆ ನಡೆಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ? ಹಾಗಿದ್ದಲ್ಲಿ ಆಡಳಿತಾಧಿಕಾರಿಯನ್ನು ಇದುವರೆವಿಗೂ ಮುಂದುವರಿಸಿಕೊಂಡು ಬರಲು ಇರುವ ಕಾರಣಗಳೇನು ಮತ್ತು ಚುನಾವಣೆಯನ್ನು ಯಾವಾಗ ನಡೆಸಲಾಗುವುದು ಎನ್ನುವುದನ್ನು ಮಾನ್ಯ ಸಹಕಾರ ಮಂತ್ರಿಗಳು ತಿಳಿಸಬೇಕು ?

ಶ್ರೀ ಎಚ್. ವಿಶ್ವಾಂತಯ್ಯ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಟಿ. ನರಸೀಪುರ ಟಿ. ನ, ಪಿ, ಸಿ. ಎಂ ಸಿ.ಗೆ ಚುನಾವಣೆಯನ್ನು ಸಧ್ಯದಲ್ಲಿ ನಡೆಸುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಮೊಕ್ಕದ್ದಮೆಯೊಂದು ಇದೆ. ಅದು ಇತ್ಯರ್ಥವಾದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು.

ಸ್ಪೆಷಲ್ ನ್ಯೂಟ್ರಿಷನ್ ಪ್ರೊಗ್ರಾಂ ಕಾರ್ಯಕ್ರಮದ ಯೋಜನೆಯಂ ಬದಲಾಗಿ ಆಂಗನವಾಡಿ ಯೋಜನೆಯಂನ್ನು ಜಾರಿಗೆ ತರುವುದು

ಶ್ರೀಮತಿ ಶಕುಂತಲ ಟಿ. ಚೌಗಲೆ (ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಯವರು ಸ್ಪೆಶಲ್ ನ್ಯೂಟಿಷನ್ ಪ್ರೋಗ್ರಾಂ ಕಾರ್ಯಕ್ರಮದ ಯೋಜನೆಗೆ ಬದಲಾಗಿ ಆಂಗನವಾಡಿಯ ಯೋಜನೆಯನ್ನು ಜಾರಿಗೆ ತರಬೇಕೆಂದು ಇಲಾಖೆಗೆ ಬರೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಯಾವಾಗ ಬಂದಿದೆ ? ಮತ್ತು ಅದಕ್ಕೆ ಮುಂದಿನ ಕ್ರಮವನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದು ತಿಳಿಸಬೇಕು ಈ ಪ್ರಸಾವನೆಯನ್ನು ಒಪ್ಪಿ ಜಾರಿಗೆ ತಂದರೆ ಸುಮಾರು ೨–೩ ಲಕ್ಷ ಮಹಿಳೆಯರ ಮಂತ್ತು ಮಕ್ಕಳ ಅಭಿವೃದ್ಧಿಯನ್ನು ಮಾಡಬಹುದು ಹಾಗೂ ನಾಲ್ಕು ಸಾವಿರ ಮಹಿಳೆಯರಿಗೆ ಕೆಲಸ ಕೊಡಬಹುದು. ಇಂತಹ ಆಂಗನವಾಡಿ ಯೋಜನೆಯಂನ್ನು ಬರುವ ೧–೪–೮೮ ರಿಂದಲೇ ಏತಕ್ಕೆ ಜಾರಿಗೆ ತರಬಾರದೆಂದು ನಾನು ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ ಈ ಬಗ್ಗೆ ಚರ್ಚೆ ನಡೆದು ಇದನ್ನು ಡ್ರಾಪ್ ಮಾಡಲಾಗಿತ್ತು. ಆದರೆ ಮುಂದಿನ ವರ್ಷದಿಂದ ಈ ವಿಚಾರವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಸದಸ್ಯೆಯವರು ಗೈರು ಹಾಜರಿ.

೬. ಕರ್ನಾಟಕದಾದ್ಯಂತ ಗ್ರಾಮಂ ಸಹಾಯಕರಿಗೆ ಆರಂ ತಿಂಗಳಂಗಳಿಂದ ಸಂಬಳವನ್ನು ಕೊಡದಿರುವುದು.

ಶ್ರೀ ಆರ್. ವೆಂಕಟರಾಮಯ್ಯ. ಮಾನ್ಯ ಅಧ್ಯಕ್ಷರೇ ಕರ್ನಾಟಕದಾದ್ಯಂತ ಗ್ರಾಮ ಸಹಾಯಕರ ಸಂಬಳವನ್ನು ೬ ತಿಂಗಳಿಂದ ಕೊಟ್ಟಿಲ್ಲ. ಅವರು ಕೊಡುವ ಸಂಬಳ ತಿಂಗಳಿಗೆ ಮುನ್ನೂರು ರೂಪಾಯಿಗಳು ಮಾತ್ರ. ಅವರೆಲ್ಲರೂ ಮಾಜಿ ತೋಟಿ ಕೆಲಸ ನಿರ್ವಹಿಸುತ್ತಿದ್ದವರು, ಆ ಸಂಸಾರಗಳಿಂದ ಬಂದವರಾಗಿದ್ದು ತುಂಬಾ ಬಡವರಾಗಿದ್ದಾರೆ. ಎಲ್ಲರಿಗೂ ಸಂಬಳ ಸಾರಿಗೆ ಕೊಡದೆ ತುಂಬಾ ತೊಂದರೆ ನೀಡುತ್ತಿರುವುದರಿಂದ ಇವರ ಬಾಕಿ ಸಂಬಳವನ್ನು ಸರ್ಕಾರ ವಿತರಿಸುವುದು ನ್ಯಾಯಬದ್ಧವಾಗಿದೆ. ಈ ವಿಳಂಬ ಮತ್ತು ಪರಿಹಾರದ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನ ಹರಿಸುತ್ತೇನೆ.

ಶ್ರೀ ಎಂ. ರಘುಪತಿ (ವಿಾನುಗಾರಿಕೆ ಮತ್ತು ಬಂದರು ಸಚಿವರು).—ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ.

೧೯೮೭–೮೮ನೇ ಸಾಲಿನ ಲೆಕ್ಕ ಶೀರ್ಷಿಕೆ ''೨೦೫೫–ಭೂ ಕಂದಾಯ'' ಇದರ ಅಡಿಯಲ್ಲಿ ಗ್ರಾಮಂ ಸಹಾಯಕರಿಗೆ ಸಂಭಾವನೆ–ಮಾಜಿ ಶ್ಯಾನುಭೋಗರು, ಪಟೇಲರು ಮತ್ತು ಕೆಳದರ್ಜೆ ಗ್ರಾಮನೌಕರರಿಗೆ ಅನುಕಂಪ ಭತ್ಯೆ ಪಾವತಿಗಾಗಿ ವಿಭಾಗಾಧಿಕಾರಿಗಳು ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು

ಬೆಳಗಾವಿ ಇವರಿಗೆ ಆಯವ್ಯಯದಲ್ಲಿ ಕ್ರಮವಾಗಿ ರೂ. ೯೩,೦೦,೦೦೦–೦೦, ರೂ. ೧,೨೬,೩೬,೦೦೦–೦೦ ರೂ. ೧,೨೮,೫೦,೦೦೦–೦೦ ಮತ್ತು ರೂ. ೧,೩೮,೦೪.೦೦೦–೦೦ ಗಳನ್ನು ಒದಗಿಸಲಾಯಿತು. ಆದರೂ ಕೆಲವು ಜಿಲ್ಲೆಗಳಲ್ಲಿನ ಗ್ರಾಮಸಹಾಯಕರು ತಮಗೆ ಕೆಲವು ತಿಂಗಳುಗಳಿಂದ ಸಂಬಳ ಕೊಡದಿರುವ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದರು, ಇದರನ್ವಯ ಎಲ್ಲಾ ವಿಭಾಗಾಧಿಕಾರಿಗಳನ್ನು ವರದಿ ಕೇಳಲಾಯಿತು. ಇದರಂತೆ ಎಲ್ಲಾ ವಿಭಾಗಾಧಿಕಾರಿಗಳು ಅಧಿಕ ಅನುದಾನ ಬೇಡಿಕೆಗಾಗಿ ಮನವಿ ಸಲ್ಲಿಸಿದರು. ಆದರಂತೆ ಬೆಳಗಾವಿ ವಿಭಾಗಕ್ಕೆ ರೂ. ೨೬,೦೧,೦೦೦–೦೦ ಗಳನ್ನು ದಿನಾಂಕ ೪–೧೧–೧೯೮೭ರಂದು ಮಂಜೂರು ಮಾಡಿ ಆದೇಶ ಹೊರಡಿಸಲಾಯಿತು ಬೆಂಗಳೂರು ಮತ್ತು ಗುಲ್ಬರ್ಗಾ ವಿಭಾಗಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ೫೦ ಲಕ್ಷ ಮತ್ತು ೧೭ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ದಿನಾಂಕ ೨೨–೧೨–೧೯೮೮ರಂದು ಆದೇಶ ಹೊರಡಿಸಲಾಯಿತು. ಮೈಸೂರು ವಿಭಾಗದಲ್ಲಿ ಸಾಕಷ್ಟು ಅನುದಾನ ವಿರುವುದರಿಂದ ಆ ವಿಭಾಗಕ್ಕೆ ಅಧಿಕ ಅನುದಾನದ ಬೇಡಿಕೆ ಇರುವುದಿಲ್ಲ.

ಈ ಅಧಿಕ ಅನುದಾನಕ್ಕೆ ಮುಖ್ಯವಾದ ಕಾರಣವೇನೆಂದರೆ ವಿಭಾಗಾಧಿಕಾರಿಗಳು ಆಯವ್ಯಯ ಅಂದಾಜನ್ನು ಸಲ್ಲಿಸುವಾಗ ಸರಿಯಾಗಿ ಪರಿಶೀಲಿಸದೆ ಸಲ್ಲಿಸಿರುವುದಾಗಿದೆ. ಈಗ ಅಧಿಕ ಅನುದಾನ ಬಿಡುಗಡೆ ಮಾಡಿರುವುದರಿಂದ ಎಲ್ಲಾ ಗ್ರಾಮಸಹಾಯಕರ ನಿಗದಿತ ಭತ್ಯೆಯನ್ನು ಶೀಘ್ರವಾಗಿ ಬಟವಾಡೆ ಮಾಡಲಾಗುತ್ತಿದೆ. ಇನ್ನು ಮುಂದೆ ೧೯೮೯–೯೯ರ ಆಯವ್ಯಯ ಅಂದಾಜನ್ನು ಸಲ್ಲಿಸುವಾಗ ಸರಿಯಾಗಿ ಪರಿಶೀಲಿಸಿ ಸಲ್ಲಿಸುವಂತೆ ವಿಭಾಗಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

೭. ಸರ್ಕಾರಿ ಪದವೀ ಪೂರ್ವ ಮಹಾ ವಿದ್ಯಾಲಯಂಗಳ ಉಪನ್ಯಾಸಕರ ಹಂದ್ದೆಗಳಿಗೆ ಸಂದರ್ಶನ ಏರ್ಪಡಿಸಿದ್ದರೂ ನೇಮಕಾತಿ ಮಾಡುವಲ್ಲಿ ವಿಳಂಬವಾಗಿರುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ರಾಜ್ಯ ಮಟ್ಟದ ಆಯ್ಕೆ ಸಮಿತಿ (ಎಸ್.ಎಲ್.ಆರ್.ಸಿ.) ಸರ್ಕಾರಿ ಪದವಿಪೂರ್ವ ಮಹಾ ವಿದ್ಯಾಲಯಗಳ ಉಪನ್ಯಾಸಕರ ಹುದ್ದೆಗಳಿಗೆ ಸಂದರ್ಶನ ಏರ್ಪಡಿಸಿತ್ತು. ನಂತರ ೧೮–೧೨–೧೯೮೬ರಂದು ಕರ್ನಾಟಕ ರಾಜ್ಯ ಪತ್ರ (ಗೆಜೆಟ್) ದಲ್ಲಿ ಆಯ್ಕೆಯಾದವರ ಯಾದಿ (ಪಟ್ಟಿ) ಯನ್ನು ಪ್ರಕಟಿಸಿತು. ಅದೆಲ್ಲಾ ಆಗಿ ಒಂದು ವರ್ಷ ಕಾಲ ಗತಿಸಿ ಹೋಯಿತು.

ಸರ್ವೋಚ್ಚ ನ್ಯಾಯಾಲಯದ ಆಜ್ಞೆಯ ಅನ್ವಯ ಈ ಎಲ್ಲಾ ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆಜ್ಞೆ ನೀಡಬೇಕಾಗಿತ್ತು. ಈ ಯಾದಿಗೆ ಹೊಸ ವಿಶಾಖಾತಿ ಸೌಲಭ್ಯಗಳ ಅನ್ವಯ ಆಗ ಬಾರದೆಂದು ನನ್ನ ಅನಿಸಿಕೆ.

ಈ ಸುದೀರ್ಘ ವಿಳಂಬದಿಂದ ಅಭ್ಯರ್ಥಿಗಳು ಜಿಗುಪ್ಸೆಗೊಂಡು ಈಗ ಸಂಘಟಿತರಾಗಿ ಇಂದಿನಿಂದ ಧರಣಿ ಸತ್ಯಾಗ್ರಹ ಆಚರಿಸಲು ನಿರ್ಧರಿಸಿದ್ದು ಸರ್ಕಾರ ಈ ಕುರಿತು ಯಾವ ಕ್ರಮ ಕೈಗೊಂಡಿದೆ ಎಂದು ತಿಳಿಯಲಿಲ್ಲ. ಈ ಎಲ್ಲಾ ಸಂಗತಿಗಳನ್ನು ಮುಂದಿಟ್ಟುಕೊಂಡು ಮಾನ್ಯ ಸಭಾಧ್ಯಕ್ಷರಾದ ತಮ್ಮ ಮೂಲಕ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯಲು ನಾನು ಬಯಸುತ್ತೇನೆ.

ಶ್ರೀ ಎಂ. ರಘುಪತಿ (ವಿಾನುಗಾರಿಕೆ ಮತ್ತು ಬಂದರು ಖಾತೆಗಳ ಸಚಿವರು).—ಉನ್ನತ ಶಿಕ್ಷಣ ಸಚಿವರ ಪರವಾಗಿ,

ಅಧ್ಯಕ್ಷರೇ, ಸಾರ್ವಜನಿಕ ಶಿಕ್ಷಣ ಇಲಾಖೆಯ ದರ್ಜೆ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಶೇಕಡ ೫೦ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳ ಹುದ್ದೆಗಳನ್ನು ನೇರನೇಮಕಾತಿಯಿಂದಲೂ ಮತ್ತು ಶೇಕಡ ೫೦ ಹುದ್ದೆಗಳನ್ನು ಪದೋನ್ನತಿಯಿಂದ ತುಂಬಲಾಗುತ್ತಿದೆ.

ಉಪನ್ಯಾಸಕರುಗಳನ್ನು ನೇರ ನೇಮಕಾತಿ ತುಂಬುವ ವಿಷಯ ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯ ವ್ಯಾಪ್ತಿಗೊಳಪಟ್ಟಿರುತ್ತದೆ. ಆಯ್ಕೆಯಲ್ಲಿ ಆಗುವ ವಿಳಂಬವನ್ನು ತಪ್ಪಿಸುವ ಸಲುವಾಗಿ, ಅಧಿಸೂಚನೆ ಸಂಖ್ಯೆ 'ಇ' ಡಿ ೨೮೧ ಡಿ.ಪಿ.ಐ. ೮೪, ದಿನಾಂಕ ೨೨–೮–೧೯೮೫ರಲ್ಲಿ ರಾಜ್ಯ ಮಟ್ಟದ ವಿಶೇಷ ನೇಮಕಾತಿ ಸಮಿತಿಯನ್ನು ರಚಿಸಿ ಆಯ್ಕೆಯನ್ನು ಕ್ಷಿಪ್ರಗತಿಯಲ್ಲಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿದೆ ಮತ್ತು ಆಯ್ಕೆ ಪಟ್ಟಿಯನ್ನು ಸಂಬಂಧಪಟ್ಟವರ ಗಮನಕ್ಕಾಗಿ ಈಗಾಗಲೇ ರಾಜ್ಯ ಪತ್ರದಲ್ಲಿ ಪ್ರಕಟಿಸಿದೆ.